

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಭ್ರಷ್ಟಾಚಾರದ ಮೊದಲ ಹೆಜ್ಜೆ...

ಕರ್ನಾಟಕದ ವಿಧಾನಸಭೆಯ ಚುನಾವಣೆ ಈಗ ಮನೆ ಬಾಗಿಲಿಗೇ ಬರುತ್ತಿದೆ. ಮತದಾರ ಪ್ರಭುವಿನ ಮುಂದೆ ರಾಜಕೀಯ ಪಕ್ಷಗಳ ಪ್ರಹಸನಗಳು ನಿತ್ಯವೂ ಅನಾವರಣಗೊಳ್ಳುತ್ತಲಿವೆ. ಚುನಾವಣೆ ಸಮೀಪಿಸುತ್ತಿದ್ದಂತೆ ರಾಜಕೀಯ ನೇತಾರರು ಹೆಣೆಯುವ ಚುನಾವಣಾ ಸಮರದ ತಂತ್ರ-ಪ್ರತಿತಂತ್ರಗಳು ಚದುರಂಗದಾಟದಂತೆ ಜನರ ಕುತೂಹಲ ತಣಿಸಲಿವೆ. ಈ ಸಂದರ್ಭದಲ್ಲಿ ಬಸವಣ್ಣನವರ ವಚನಗಳ ಎರಡು ಸಾಲು ನಮ್ಮ ನೆನಪಿಗೆ ಬರುತ್ತಿವೆ: 1) "ಕಂಡ ಕಂಡವರ ಗಂಡರೆಂದೆಂಬ ದುಂಡೆಯನವಳ ಸಜ್ಜನೆ ಎನ್ನಬಹುದೇ?" ಅಂದರೆ ದಾರಿಬೀದಿಯಲ್ಲಿ ಕಾಣಿಸುವ ಗಂಡಸರನ್ನೆಲ್ಲಾ ತನ್ನ ಗಂಡ ಎಂದು ಅಪ್ಪಿಕೊಳ್ಳಲು ಮುಂದಾಗುವ ಮಹಿಳೆಯನ್ನು ಗರತಿ ಎನ್ನಲು ಸಾಧ್ಯವೇ? 2) "ಸೂಳೆಗೆ ಹುಟ್ಟಿದ ಕೂಸಿನಂತೆ ಆರನಾದರೆಯೂ ಅಯ್ಯಾ ಅಯ್ಯಾ ಎನಲಾರೆ!" ಅಂದರೆ ತನ್ನ ತಂದೆ ಯಾರೆಂದು ತಿಳಿಯದ ವೇಶ್ಯೆಯ ಮಗು ಎದುರಿಗೆ ಕಾಣಿಸಿದ ವಿಟಪುರುಷರನ್ನೆಲ್ಲಾ ತನ್ನ ತಂದೆಯೆಂದು ಭಾವಿಸಿ 'ಅಪ್ಪಾ, ಅಪ್ಪಾ' ಎಂದು ಕರೆಯುವಂತೆ! ಇವೆರಡೂ ಉದಾಹರಣೆಗಳ ಮೂಲಕ ಒಬ್ಬ ದೇವರಲ್ಲಿ ನಂಬಿಕೆಯನ್ನು ಇಟ್ಟುಕೊಳ್ಳದೆ ಬಹುದೇವತಾರಾಧನೆಯನ್ನು ಮಾಡುವ ಜನರ ಮನೋಧರ್ಮವನ್ನು ಬಸವಣ್ಣನವರು ಖಂಡಿಸಿದ್ದಾರೆ. "ನಂಬಿದ ಹೆಂಡತಿಗೆ ಗಂಡನೊಬ್ಬ ಕಾಣಿರೋ, ನಂಬಬಲ್ಲ ಭಕ್ತಂಗೆ ದೇವನೊಬ್ಬ ಕಾಣಿರೋ" ಎಂದು ಏಕದೇವತಾನಿಷ್ಠೆಯ ಮಹತ್ವವನ್ನು ಪ್ರತಿಪಾದಿಸಿದ್ದಾರೆ.

ಈ ಮೇಲಿನ ಉದಾಹರಣೆಗಳಿಗೂ ಚುನಾವಣೆಗೂ ಏನು ಸಂಬಂಧವಿದೆಯೆಂದು ನಿಮಗೆ ಅನುಮಾನವೇ? ಯಾರನ್ನಾದರೂ ನಿಮ್ಮ ತಂದೆಯ ಹೆಸರೇನೆಂದು ಕೇಳಿದರೆ ತಟ್ಟನೆ ಉತ್ತರ ಕೊಡುತ್ತಾರೆ. ಆದರೆ ಮುಂಬರುವ ಚುನಾವಣೆಗೆ ನಿಲ್ಲಲು ಟಿಕೆಟ್ಟಿಗಾಗಿ ದೌಡಾಯಿಸುತ್ತಿರುವ ಇಂದಿನ ಅನೇಕ ರಾಜಕಾರಣಿಗಳನ್ನು 'ನಿಮ್ಮ ಪಕ್ಷ ಯಾವುದು?' ಎಂದು ಕೇಳಿದರೆ ನಿಮಗೆ ತಟ್ಟನೆ ಉತ್ತರ ಸಿಗುತ್ತದೆಯೇ? ಟಿಕೆಟ್ಟು ಸಿಕ್ಕರೆ ಈ ಪಕ್ಷ, ಸಿಗದಿದ್ದರೆ ಆ ಪಕ್ಷ! ಕೊಂಬೆಯಿಂದ ಕೊಂಬೆಗೆ ಜಿಗಿಯುವ ಮಂಗಗಳು! ಪಕ್ಷ ಯಾವುದೋ ಗೊತ್ತಿಲ್ಲ ಎಂದು ಹೇಳುವುದು ತಂದೆ ಯಾರೋ ಗೊತ್ತಿಲ್ಲ ಎಂದು ಹೇಳುವಷ್ಟೇ ಅವಮಾನಕರ ಎಂಬುದನ್ನು ಈ ಜನರು ತಿಳಿದುಕೊಳ್ಳುವುದು ಒಳ್ಳೆಯದು. ಗುರುಹಿರಿಯರ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ಮದುವೆಯಾದ ಹೆಂಡತಿಗೆ ಕೈಕೊಟ್ಟು ಬೇರೊಬ್ಬಳೊಂದಿಗೆ ಚಕ್ಕಂದವಾಡುವ ನಿರ್ಲಜ್ಜತನವನ್ನು ನೀವಿಂದು ರಾಜಕೀಯ ರಂಗದಲ್ಲಿ ಕಾಣುತ್ತಿದ್ದೀರಿ. ಬೇರಾವ ದೇಶಗಳಲ್ಲೂ ಕಾಣದ ನೈತಿಕ ದಿವಾಳಿತನ ಭಾರತೀಯ ರಾಜಕಾರಣದಲ್ಲಿ ಎದ್ದುಕಾಣಿಸುತ್ತಿದೆ. By hook or crook ಟಿಕೆಟ್ ಪಡೆಯಬೇಕೆಂಬ ಹವಣಿಕೆ. ಪ್ರಭಾವೀ ಪಕ್ಷದ ಟಿಕೆಟ್ ಪಡೆದರೆ ಅರ್ಧ ಗೆದ್ದಂತೆ ಎಂಬ ರಾಜಕೀಯ ಲೆಕ್ಕಾಚಾರ. ಒಂದು ಪಕ್ಷದಿಂದ ಟಿಕೆಟ್ ಪಡೆಯಲು ಪ್ರಯತ್ನಿಸುವುದು, ಅಲ್ಲಿ ಟಿಕೆಟ್ ಸಿಗದಿದ್ದರೆ ತನಗೆ ಟಿಕೆಟ್ ಕೊಡುವ ಇನ್ನೊಂದು ಪಕ್ಷವನ್ನು ಹುಡುಕಿಕೊಂಡು ಹೋಗುವುದು. ಟಿಕೆಟ್ ಸಿಗುತ್ತದೆಂದಾದರೆ ಒಂದು ಕಾಲದಲ್ಲಿ ವಾಚಾಮಗೋಚರವಾಗಿ ನಿಂದಿಸುತ್ತಿದ್ದ ಪಕ್ಷಕ್ಕೆ ನಿರ್ಲಜ್ಜೆಯಿಂದ ಸೇರಿಕೊಳ್ಳುವುದು, ಅಷ್ಟೇ ನಿರ್ಲಜ್ಜೆಯಿಂದ ಆ ಪಕ್ಷದವರು ಸಿಹಿತಿನ್ನಿಸಿ ಬರಮಾಡಿಕೊಳ್ಳುವುದು. ಇದುವೇ ರಾಜಕೀಯ ದೊಂಬರಾಟ. ಇದುವೇ ಭ್ರಷ್ಟಾಚಾರದ ಮೊದಲ ಹೆಜ್ಜೆ.

ರಾಜಕೀಯ ಪಕ್ಷಗಳ ವರಿಷ್ಠರು ಟಿಕೆಟ್ ಹಂಚಿಕೆ ಮಾಡುವಾಗ ಅನುಸರಿಸುವ ಮಾನದಂಡಗಳಾದರೂ ಏನು? ಅಭ್ಯರ್ಥಿ ಸಚ್ಚಾರಿತ್ರ್ಯವುಳ್ಳವನೇ, ಜನಾನುರಾಗಿಯೇ, ಜನಪರ ಕಾಳಜಿಯುಳ್ಳವನೇ - ಇವಾವೂ ಅಲ್ಲ. ಇದು ಎಲ್ಲ ಪಕ್ಷಗಳಿಗೂ ಅನ್ವಯಿಸುವ ಮಾತು. ಪಕ್ಷಗಳು ತಂತಮ್ಮ ತತ್ವ ಸಿದ್ಧಾಂತಗಳನ್ನು ಎಷ್ಟೇ ದೊಡ್ಡ ಗಂಟಲಿನಿಂದ ಕೂಗಿ ಕೂಗಿ ಸಾರಿದರೂ ಯಾವ ಪಕ್ಷದಲ್ಲೂ ಯಾವುದೇ ತತ್ವ ಸಿದ್ಧಾಂತ ಈಗ ಉಳಿದಿಲ್ಲ. ಟಿಕೆಟ್ ಬಯಸುವ ಅಭ್ಯರ್ಥಿ ಗೆಲ್ಲುವ ಶಕ್ತಿ ಉಳ್ಳವನೇ ಎಂಬುದೊಂದೇ ಲೆಕ್ಕಾಚಾರ. ಗೆಲ್ಲುವ ಶಕ್ತಿ ಎಂದರೆ ಚುನಾವಣೆಯ ಸಂದರ್ಭದಲ್ಲಿ ಮತದಾರರಿಗೆ ಹಣ-ಮದ್ಯ-ಸೀರೆ-ಪಂಚೆ ಹಂಚಲು ಸಮರ್ಥ, ಪಾರ್ಟಿ ಫಂಡಿಗೆ ದೊಡ್ಡ ಮೊತ್ತ ಸಂದಾಯ ಮಾಡುವ ಧನಿಕ, ಅದರ ಜೊತೆಗೆ ಜಾತಿಯ ಬಲವುಳ್ಳವನು ಎಂದರ್ಥ.

ಇಂಥದೊಂದು ಪರಿಸ್ಥಿತಿ ದೇಶದಲ್ಲಿ ಉದ್ಭವಿಸಬಹುದೆಂದು ಹಿಂದೆ ನಿಯಮಗಳನ್ನು ರೂಪಿಸಿದ ಕಾನೂನು ತಜ್ಞರಿಗೆ ಇರಲಿಲ್ಲವೆನಿಸುತ್ತದೆ. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಇಂದಿನ ಕೊಳಕು ರಾಜಕೀಯದ ಕಲ್ಪನೆ ಇರಲಿಲ್ಲ. ಆಗ ಸ್ವಾತಂತ್ರ್ಯ ಹೋರಾಟಗಾರರು ತಮ್ಮ ಜೀವವನ್ನು ತೃಣವಾಗಿ ಭಾವಿಸಿ ಸ್ವಾತಂತ್ರ್ಯವನ್ನು ತಮ್ಮ ಕಾಲಾವಧಿಯಲ್ಲಿ ಪಡೆಯದಿದ್ದರೂ ಅದಕ್ಕಾಗಿ ನಗುನಗುತ್ತಾ ನೇಣುಗಂಬವೇರಿದರು. ಆದರೆ ಇಂದಿನ ಚುನಾವಣೆಗಳಲ್ಲಿ 'ಟಿಕೆಟ್ಟು ಹೋರಾಟಗಾರರು' ಹುಟ್ಟಿಕೊಂಡಿದ್ದಾರೆ. ಸದ್ಯ ಇವರು ಸ್ವಾತಂತ್ರ್ಯ ಹೋರಾಟಗಾರರಂತೆ ಪಿಂಚಣಿ ಪಡೆಯಲು ಅರ್ಜಿ ಸಲ್ಲಿಸುವುದಿಲ್ಲವೆಂಬುದೊಂದೇ ಸಮಾಧಾನಕರ!

ಹಿಂದೆ ಪಕ್ಷಾಂತರ ನಿಷೇಧ ಕಾಯಿದೆಯು ಇರಲಿಲ್ಲ. ಆಗ ಗೆದ್ದು ಬಂದ ಅಭ್ಯರ್ಥಿಗಳಿಗೆ 'ಆಡಿದ್ದೇ ಆಟ, ಹೂಡಿದ್ದೇ ಲಗ್ಗೆ' ಎನ್ನುವಂತಾಗಿತ್ತು. ಅಧಿಕಾರಕ್ಕಾಗಿ ಜೊಲ್ಲು ಸುರಿಸುತ್ತಾ ಪಕ್ಷದಿಂದ ಪಕ್ಷಕ್ಕೆ ಹಾರಾಡುತ್ತಿದ್ದರು.

- 2 -

ಅಭ್ಯರ್ಥಿಗಳು ಗೆದ್ದು ಬಂದ ನಂತರ ಆಡುತ್ತಿದ್ದ ಮಂಗಾಟಗಳನ್ನು ನಿಯಂತ್ರಿಸಲು ಪಕ್ಷಾಂತರ ನಿಷೇಧ ಕಾನೂನು ಜಾರಿಗೆ ಬಂದಿತು. ಪಕ್ಷಾಂತರ ಪಿಡುಗಿಗೆ ಕಡಿವಾಣ ಬಿತ್ತು. ಆದರೆ ಈಗಿರುವ ಕಾನೂನಿನಿಂದ ಚುನಾವಣಾ ಪೂರ್ವದಲ್ಲಿ ನಡೆಯುವ ರಾಜಕಾರಣಿಗಳ ಅನೀತಿಯುತ ನಡವಳಿಕೆಗಳನ್ನು ನಿಯಂತ್ರಿಸಲು ಆಗುತ್ತಿಲ್ಲ. ಪಕ್ಷಾಂತರ ನಿಷೇಧ ಕಾಯಿದೆಯಂತೆಯೇ ಈಗ ಇನ್ನೊಂದು ಕಾಯಿದೆಯನ್ನು ಜಾರಿಗೆ ತಂದು ಚುನಾವಣಾ ಪೂರ್ವದಲ್ಲಿ ರಾಜಕಾರಣಿಗಳು ಮಾಡುವ ಕಪಿಚೇಷ್ಟೆಗೂ ಒಂದು ಕಡಿವಾಣದ ಹಾಕುವ ಅಗತ್ಯವಿದೆ.

ಯಾವುದೇ ಮತಕ್ಷೇತ್ರದಲ್ಲಿ ಸುಮಾರು 2 ಲಕ್ಷ ಜನ ಮತದಾರರಿರುತ್ತಾರೆ. ಆದರೆ ಅವರಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸುವ ಎಲ್ಲ ಪಕ್ಷಗಳ ಹುರಿಯಾಳುಗಳು ಗರಿಷ್ಠ 25 ಜನರು ಮಾತ್ರ. ಈ 25 ಜನರು ರಾಜಕೀಯ ಪಕ್ಷಗಳನ್ನು ಆಟವಾಡಿಸುತ್ತಾರೋ ಅಥವಾ ಅವರನ್ನು ಪಕ್ಷಗಳು ಆಟ ಆಡಿಸುತ್ತವೆಯೋ ಎಂದು ಹೇಳುವುದು ಕಷ್ಟವೇನಲ್ಲ. ಸಂದರ್ಭಾನುಸಾರ ಅವರು ಇವರನ್ನು, ಇವರು ಅವರನ್ನೂ ಆಟವಾಡಿಸುತ್ತಾರೆ. ಇದಕ್ಕೆ ಕಡಿವಾಣ ಹಾಕಲು ಈಗಿರುವ ನೀತಿಸಂಹಿತೆಯಿಂದ ಸಾಧ್ಯವಾಗುತ್ತಿಲ್ಲ. ಅದನ್ನು ಇನ್ನಷ್ಟು ಬಲಗೊಳಿಸಬೇಕಾಗಿದೆ.

ಗೆದ್ದು ಬಂದ ಮೇಲೆ ಅಧಿಕಾರಕ್ಕಾಗಿ ಪಕ್ಷಾಂತರ ಮಾಡುವುದು ಮದುವೆಯಾದ ನಂತರ ಹೆಂಡತಿಯಿಂದ ಡೈವೋರ್ಸ್ ಪಡೆಯುವ ಗಂಡನಂತೆ. ಚುನಾವಣಾ ಪೂರ್ವದಲ್ಲಿ ಟಿಕೆಟ್ ಸಿಗಲಿಲ್ಲವೆಂದು ಪಕ್ಷದಿಂದ ಪಕ್ಷಕ್ಕೆ ಜಿಗಿಯುವುದು ಮುಗುಳ್ನಗೆ ಬೀರುತ್ತಾ ಫೋಟೋ ತೆಗೆಸಿಕೊಂಡು ನಿಶ್ಚಿತಾರ್ಥ ಮಾಡಿಕೊಂಡಿದ್ದ ಹೆಣ್ಣಿಗೆ ಕೈಕೊಟ್ಟು ಬೇರೊಬ್ಬಳನ್ನು ಮದುವೆಯಾಗುವ ಗಂಡಿನಂತೆ! ಈಗಾಗಲೇ ನಿಶ್ಚಿತಾರ್ಥವಾಗಿದೆಯೆಂಬ ಸಂಗತಿ ಗೊತ್ತಿದ್ದೂ ಹೆಣ್ಣು ಕೊಡಲು ಮುಂದಾಗುವ ಮಾವ ಎಂಥವನು ಎಂಬುದೂ ಇಲ್ಲಿ ಮುಖ್ಯ. ಅಂತಹ ಕೆಟ್ಟ ಮಾವಂದಿರೇ ಇಂದಿನ ಎಲ್ಲ ಪಕ್ಷಗಳ ವರಿಷ್ಠರು. ಈ 'ಮಾವಂದಿರು' ಕಾನೂನಿನಲ್ಲಿರದ ಈ ಕೆಳಗಿನ ನೀತಿ ಸಂಹಿತೆಯನ್ನು ಪಾಲಿಸಲು ಸಿದ್ಧರಿರುವರೇ?

1. ಪ್ರತಿಯೊಂದು ಪಕ್ಷವೂ ತನ್ನ ಪಕ್ಷದ ಟಿಕೆಟ್ ಆಕಾಂಕ್ಷಿಗಳನ್ನು ಚುನಾವಣೆಯ ದಿನಾಂಕ ಘೋಷಣೆಯಾಗುವ ಮೊದಲೇ ಪಕ್ಷದ ಸದಸ್ಯರನ್ನಾಗಿ ನೋಂದಾಯಿಸಿಕೊಳ್ಳಬೇಕು.
2. ಚುನಾವಣೆಯ ದಿನಾಂಕ ಘೋಷಣೆಯಾದ ಮೇಲೆ ಯಾರನ್ನೂ ಪಕ್ಷದ ಸದಸ್ಯರನ್ನಾಗಿ ತೆಗೆದುಕೊಳ್ಳಬಾರದು.
3. ಬೇರೆ ಪಕ್ಷದ ಸದಸ್ಯರಾಗಿದ್ದು ಅಲ್ಲಿ ಟಿಕೆಟ್ ಸಿಗಲಿಲ್ಲವೆಂದು ತಮ್ಮ ಪಕ್ಷ ಸೇರಲು ಬರುವವರಿಗೆ ಮಣೆ ಹಾಕಬಾರದು.

ಈ ನಿಟ್ಟಿನಲ್ಲಿ ಎಲ್ಲ ಪಕ್ಷಗಳೂ ಸೇರಿ ಒಂದು ಗೌರವಯುತ ಒಡಂಬಡಿಕೆಯನ್ನು ಮಾಡಿಕೊಳ್ಳಬಲ್ಲರೇ?

**7.2.2013**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**